


# ಗಾಜಿನ ಜಾಡಿಯಲ್ಲಿನ ಬಣ್ಣದ ಮೀನು

ರವಿಕುಮಾರ ಕಾಶಿ

ಕಲಾವಿದರ ಚಿತ್ರಗಳಲ್ಲಿ; ಬಗೆಬಗೆಯ ಜಾಹೀರಾತುಗಳ ಮೂಲಕ ಅನಾವರಣಗೊಳ್ಳುತ್ತಿರುವ ಸ್ತ್ರೀ ಬಿಂಬಗಳು ಸುತ್ತಲ ಸಮಾಜದ ಮನಸ್ಥಿತಿಯ ಪ್ರತಿಫಲನವಾಗಿರುವುದಂತೂ ಹೌದು

ನಮ್ಮ ಮಧ್ಯೆ ಬಿಂಬ(ಇಮೇಜ್)ವೊಂದು ಸೃಷ್ಟಿಯಾದಾಗ, ಚಾಲ್ತಿಗೆ ಬಂದಾಗ, ಅದರ ಸೃಷ್ಟಿ ಓರ್ವ ವ್ಯಕ್ತಿಯಿಂದ ಆಗಿದ್ದರೂ ಅದರ ಹಿನ್ನೆಲೆಯಲ್ಲಿ ಕೆಲಸ ಮಾಡಿದ ವಿಚಾರಗಳು, ನಂಬಿಕೆಗಳು, ಪೂರ್ವಾಗ್ರಹಗಳು, ಸಾಂಸ್ಕೃತಿಕ ಚೌಕಟ್ಟುಗಳು ಬಿಂಬದ ಸ್ವರೂಪವನ್ನು ನಿರ್ಧರಿಸುತ್ತವೆ. ಈ ಅವ್ಯಕ್ತ ಶಕ್ತಿಗಳ ಅರಿವು ಕಲಾವಿದರಿಗೂ ಇಲ್ಲದೇ ಇರಬಹುದು. ಅದೇ ರೀತಿ ನಮ್ಮ ಸುತ್ತಲೂ ತುಂಬಿರುವ ಬಿಂಬಗಳನ್ನು ನೋಡುವಾಗ ಅವನ್ನು ನಾವು ನಿಷ್ಕ್ರಿಯವಾಗಿ ಸ್ವೀಕರಿಸುತ್ತೇವೊ ಅಥವಾ ವಿಮರ್ಶಾತ್ಮಕವಾಗಿ ಪರಿಶೀಲಿಸಿ, ಅದರ ಬಗ್ಗೆ ಆಲೋಚಿಸಿ ಪರಿಗ್ರಹಿಸುತ್ತೇವೋ ಎಂಬುದು ಮುಖ್ಯ. ಅವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಬೇಕಾದರೆ ಬಿಂಬದ ಎಲ್ಲ ಆಯಾಮಗಳನ್ನು ಗಮನಿಸುವ ಅಗತ್ಯವಿದೆ. ನಾವು ಪರಿಶೀಲಿಸುವ ಬಿಂಬವು ಕಲೆಯ ಕ್ಷೇತ್ರದೊಳಗಿನ ಬಿಂಬವಾಗಿರಬಹುದು ಅಥವಾ ಜಾಹೀರಾತು ಅಥವಾ ಜನಪ್ರಿಯ ಕ್ಯಾಲೆಂಡರ್‌ನಲ್ಲಿ ಕಂಡುಬರುವಂತಹ ಬಿಂಬವಾಗಿರಬಹುದು. ಅವುಗಳೆಲ್ಲ ಬಳಸುವುದು ದೃಶ್ಯಭಾಷೆಯನ್ನು ಹಾಗಾಗಿ ಅವುಗಳಲ್ಲಿ ಮೇಲು ಕೀಳು ಎಂದು ತರತಮ ಮಾಡುವುದು ಬಿಂಬಗಳ ಅಧ್ಯಯನದ ಚೌಕಟ್ಟಿನಲ್ಲಿ ಅಸಂಗತ.




ಬಿಂಬಗಳನ್ನು ಪರಿಶೀಲಿಸಬೇಕಾದರೆ ಅವುಗಳ ಯಾವ ಆಯಾಮದತ್ತ ಗಮನ ನೀಡಬೇಕು ಎಂಬುದನ್ನು ನೋಡೋಣ. ಮೊದಲಿಗೆ ಆ ಬಿಂಬವನ್ನು ಸೃಷ್ಟಿಸಿದ್ದು ಯಾರು? ಪುರುಷ ಅಥವಾ ಸ್ತ್ರೀ ಕಲಾವಿದರೆ? ಅದು ಯಾವ ವಿಷಯವನ್ನು ತೋರಿಸುತ್ತಿದೆ? ಆ ಬಿಂಬವನ್ನು ಅನುಭೋಗಿಸುವವರು ಯಾರು? ಅದು ಪುರುಷ ಪ್ರಧಾನ ಸಮಾಜವೇ, ಸಾಂಸ್ಕೃತಿಕ ಹಿನ್ನೆಲೆ, ಮಾನಸಿಕ ಚೌಕಟ್ಟು ಏನು ಎಂಬೆಲ್ಲ ವಿವರಗಳು ಬೇಕಾಗುತ್ತವೆ. ಜೊತೆಗೇ ಕಲಾವಿದ ಮತ್ತು ಅವರ ಕಲಾಕೃತಿಯಲ್ಲಿ ಚಿತ್ರಣಗೊಂಡ ವ್ಯಕ್ತಿ / ವಸ್ತುವಿನ ನಡುವಣ ಅಧಿಕಾರದ ಸಂಬಂಧ ಎಂತಹುದು – ಈ ಎಲ್ಲ ಅಂಶಗಳನ್ನು ಪರಿಗಣಿಸಿದಾಗ ಚಿತ್ರಿತ ಬಿಂಬದ ರೂಪುರೇಷೆಗಳು ಯಾವ ರೀತಿ ನಿರ್ಧರಿತವಾಯಿತು, ಅದರ ತಥಾಕಥಿತ ರೂಪಕ್ಕೂ, ಮೇಲ್ನೋಟಕ್ಕೆ ಕಾಣುವ ವಿವರಕ್ಕೂ ಅದರ ಹಿಂದಿನ ಸೂಚ್ಯವಾದ ಧ್ವನಿಗೂ ಇರುವ ಅಂತರವನ್ನು ನಾವು ಗ್ರಹಿಸುವುದು ಸಾಧ್ಯವಾಗುತ್ತದೆ.

ಅಂತಹದೊಂದು ಉದಾಹರಣೆಯನ್ನು ನೋಡುವುದಾದರೆ, ಬೆಂಗಳೂರಿನ ಹೊರವಲದಲ್ಲಿರುವ ಮಾಗಡಿಯಿಂದ ನಗರದೊಳಕ್ಕೆ ಬಂದು ಹೋಗುವ ಅನೇಕ ಬಸ್ಸುಗಳ ಹಿಂಬಾಗದಲ್ಲಿ ಗ್ರಾಮ ಜೀವನಕ್ಕೆ ಸಂಬಂಧಿಸಿದ ಚಿತ್ರಗಳನ್ನು ಕಾಣಬಹುದು. ಅಂತಹ ಬಸ್ಸೊಂದರಲ್ಲಿ ಹರಿಯುತ್ತಿರುವ ತೊರೆಯಿಂದ ನೀರು ತುಂಬಿಕೊಳ್ಳುತ್ತಿರುವ ಸ್ತ್ರೀಯರ ಚಿತ್ರವನ್ನು ಕಾಣಬಹುದು. ಅದೇ ಚಿತ್ರದಲ್ಲಿ ತೊರೆಗೆ ಅಡ್ಡಲಾಗಿ ಕಟ್ಟಿದ ಮುರುಕು ಸೇತುವೆಯನ್ನು ಎತ್ತಿನ ಬಂಡಿಯಲ್ಲಿ ದಾಟುತ್ತಿರುವವರನ್ನೂ ಹಾಗೂ ಹಿಂಬದಿಯಲ್ಲಿ




ಹೆಂಚಿನ ಹಾಗೂ ಹುಲ್ಲಿನ ಛಾವಣಿ ಹೊದೆಸಿದ ಮನೆಗಳನ್ನು ಕಾಣಬಹುದು. ಮೊದಲ ನೋಟಕ್ಕೆ ಚೆಂದಾದ ಹಳ್ಳಿಯ ರೊಮ್ಯಾಂಟಿಕ್ ಚಿತ್ರ ಇದು. ಹಳ್ಳಿಯಿಂದ ಬರುವ ಬಸ್ಸುಗಳು ತಮ್ಮೂರಿನ ಭಾವನಾತ್ಮಕ ತುಣುಕನ್ನು ತಮ್ಮೊಂದಿಗೆ ನಗರಕ್ಕೆ ತರುತ್ತಿದ್ದಾರೆ ಅನ್ನಿಸಿದರೂ ವಾಸ್ತವದಲ್ಲಿ ಹಳ್ಳಿಗಳ ಸ್ಥಿತಿ ಇದಕ್ಕಿಂತ ಹೆಚ್ಚು ಭಿನ್ನವಾಗೇನಿಲ್ಲ. ಹಾಗಾದರೆ, ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಹಳ್ಳಿಯ ಚಿತ್ರ ಏಕೆ ಬದಲಾಗಿಲ್ಲ ಎಂಬ ಪ್ರಶ್ನೆ ಏಳುತ್ತದೆ. ಪೈಪಿನಲ್ಲಿ ಹರಿವ ಕುಡಿಯುವ ನೀರಿಲ್ಲ, ಪಕ್ಕಾ ಸೇತುವೆಗಳಾಗಲೀ, ಮನೆಗಳಾಗಲೀ ಇಲ್ಲವಲ್ಲ. ಈ ಸ್ಥಿತಿ ಬದಲಾಗುವುದು ಎಂದು? ಸರ್ಕಾರ ತನ್ನ ಹೊಣೆಯನ್ನು ನಿರ್ವಹಿಸಿಲ್ಲವಲ್ಲ, ಹೆಣ್ಣುಮಕ್ಕಳು ನೀರು ಹೊರುವ ಕರ್ಮ ನಿಂತಿಲ್ಲವಲ್ಲ ಎಂದೂ ಅನಿಸುತ್ತದೆ. ಅಲ್ಲಿ ಕಾಣುವ ನೀರು ಹೊರುತ್ತಿರುವ ಮಹಿಳೆಯರ ಚಿತ್ರವಂತೂ ಎಲ್ಲ ಕಡೆಯೂ ನೋಡಲು ಸಿಗುವ ಜನಪ್ರಿಯ ಬಿಂಬ.

ಎಲ್ಲ ಕಡೆಯೂ ಕಾಣ ಸಿಗುವ ಈ ನೀರು ಹೊರುತ್ತಿರುವ ಅಥವಾ ಕೊಡ ಹಿಡಿದು ನೀರಿಗೆ ಬಂದಿರುವ ಮಹಿಳೆಯ ಚಿತ್ರ, ನೈಜತೆಯನ್ನು ಬಿಂಬಿಸುತ್ತದೆಯೋ ಅಥವಾ ಅದನ್ನು ಚಿತ್ರಿಸುವಾಗ ಕಲಾವಿದರು ಅದರಲ್ಲಿ ತಮ್ಮ ಕಾಮನೆ, ಧೋರಣೆ, ಗ್ರಹಿಕೆ ಇವುಗಳನ್ನು ಬೆರೆಸಿದ್ದಾರೋ ಎಂಬುದನ್ನು ನೋಡಬೇಕು. ಕಲಾವಿದ ಶಶಿಕಾಂತ ಧೋತ್ರೆ, ಅಮಿತ್ ಭಾರ್ ಇತ್ಯಾದಿ ಅನೇಕ ಕಲಾವಿದರು ರಚಿಸುವ ಚಿತ್ರಗಳಲ್ಲಿ ಹಾಗೂ ಟೂರಿಸ್ಟ್‌ಗಳು ಕೊಳ್ಳುವ ಜನಪ್ರಿಯ ಚಿತ್ರಗಳಲ್ಲಿ ಕಂಡುಬರುವ ನೀರು ಹೊರುವ ಮಹಿಳೆ ತುಂಬು ಯೌವನದಲ್ಲಿರುವ, ಸುಂದರಿಯಾದ, ಹೆಚ್ಚಿನ ಬಾರಿ ಗೋದಿ ಮೈಬಣ್ಣದ ಸ್ತ್ರೀ ಯಾಗಿರುತ್ತಾಳೆ. ಕೆಲವೊಮ್ಮೆ ಆಕೆ ಒದ್ದೆಯಾದ ಬಿಳಿ ಬಣ್ಣದ ತುಂಡು






ಸೀರೆಯುಟ್ಟಿದ್ದು ಆಕೆಯ ಅಂಗಾಂಗಗಳು ನೋಡುಗರಿಗೆ ಅಂದಾಜು ಸಿಗಬೇಕು ಎಂಬಂತಹ ರೀತಿಯಲ್ಲಿ ಚಿತ್ರಿಸಿದಂತಹವು. ಆಗೀಗ ಕೆಲವೊಂದು ಚಿತ್ರದಲ್ಲಿ ಹಿನ್ನೆಲೆಯಲ್ಲಿ ಕೃಷ್ಣನನ್ನು ತೋರಿಸಿ ಆಕೆ ಗೋಪಿಕೆ ಎಂಬಂತಹ ಸೂಚನೆಯೊಂದಿಗೆ ಆ ಚಿತ್ರಕ್ಕೆ ಪುರಾಣದ ಗೌರವದ ಚೌಕಟ್ಟು ಒದಗಿಸಿದ ಉದಾಹರಣೆಗಳೂ ಸಿಗುತ್ತವೆ. ಆಕೆ ಕೊಡ ಹೊತ್ತಿರುವುದು ಅಥವಾ ನೀರಿಗೆ ಬಂದಿರುವುದು ನೆಪಮಾತ್ರಕ್ಕೆ, ಅಲ್ಲಿ ಕಲಾವಿದನಿಗೆ ಪುರುಷ ನೋಟದ ಹಸಿವನ್ನು ಹಿಂಗಿಸಲಿಕ್ಕೆ, ಪುರುಷ ಕಲಾವಿದನಿಂದ ಚಿತ್ರಿಸಲ್ಪಟ್ಟ ಕೃತಿ ಇದು ಎನ್ನಿಸಿಬಿಡುತ್ತದೆ. ಅದನ್ನು ಕೊಂಡು ತನ್ನ ಮನೆಯಲ್ಲಿ ಪ್ರದರ್ಶಿಸುವುದೂ ಸಹ ಒಬ್ಬ ಪುರುಷ ಸಂಗ್ರಹಕಾರನೇ ಇರಬಹುದು ಮತ್ತು ಹೆಚ್ಚಿನ ಸಲ ಪುರುಷ ಪ್ರಧಾನ ವಾಣಿಜ್ಯ ಪ್ರಪಂಚದಲ್ಲಿ ಅದನ್ನು ಕೊಳ್ಳುವ ಶಕ್ತಿ ಅವನಿಗೇ ಇರುವುದು ಮತ್ತು ಯಾವ ಚಿತ್ರ ಕೊಳ್ಳಬೇಕು, ಎಲ್ಲಿ ಅದನ್ನು ಪ್ರದರ್ಶಿಸಬೇಕು ಈ ನಿರ್ಧಾರಗಳನ್ನು ಬಹುತೇಕ ಆತನೇ ತೆಗೆದುಕೊಳ್ಳುವುದು. ಹಾಗಾಗಿ ಇಲ್ಲಿ ಚಿತ್ರ ಬರೆಯುವ ರೀತಿ ನೈಜ ಶೈಲಿ– ಫೋಟೋ ರಿಯಲಿಸಂ ಶೈಲಿಯಲ್ಲಿ ಇದ್ದರೂ ಅದು ನಿಜ ಜೀವನದಲ್ಲಿ ನೀರು ಹೊರುವ ಸ್ತ್ರೀಯ ಸಹಜವಾದ ಭಾವ ಭಂಗಿಯ ವಾಸ್ತವ ಚಿತ್ರಣವಲ್ಲ. ಬಹುಶಃ ಸ್ತ್ರೀ ಕಲಾವಿದೆಯೊಬ್ಬಳು ಇದೇ ವಸ್ತುವಿನ ಚಿತ್ರ ಬಿಡಿಸಿದ್ದಾದರೆ ಅದು ಬಹಳ ಭಿನ್ನವಾದ ಚಿತ್ರವಾಗುವ ಸಾಧ್ಯತೆ ಇದೆ. ಮತ್ತೆ, ನಾನು ಈ ತನಕ ದಷ್ಟಪುಷ್ಟ ಮಾಂಸಖಂಡದ, ಕಮ್ಮಿ ಪ್ರಮಾಣದ ಒದ್ದೆ ಬಟ್ಟೆ ಧರಿಸಿಕೊಂಡು ನೀರು ಹೊರುತ್ತಿರುವ ಪುರುಷನ ಚಿತ್ರವನ್ನು ಎಲ್ಲೂ ನೋಡಿಲ್ಲ. ಅದು ಏಕೆ ಎಂದು ಯೋಚನೆ ಮಾಡಿದರೆ ಬಿಂಬ ಸೃಷ್ಟಿಯ ಹಿಂದೆ ಕೆಲಸ ಮಾಡುವ ಅವ್ಯಕ್ತ ಶಕ್ತಿಗಳ ಅಳತೆ ಸಿಕ್ಕೀತು.



ಮುಂಬಯಿಯಿಂದ ನೂರಾ ನಲವತ್ತು ಕಿಲೋಮೀಟರ್ ದೂರದಲ್ಲಿರುವ ದೆಂಗನ್‌ಮಾಲ್ ಹಳ್ಳಿಯಲ್ಲಿ ಪೈಪಿನಿಂದ ಹರಿದು ಬರುವ ನೀರಿಲ್ಲ, ಹಳ್ಳಿಯ ಬಾವಿಗಳೆಲ್ಲ ಬತ್ತಿ ಹೋಗಿವೆ ಹಾಗಾಗಿ ಕಿಲೋಮೀಟರ್‌ಗಳ ದೂರ ನಡೆದೇ ಅಲ್ಲಿಂದ ನೀರನ್ನು ಕೊಡಗಳಲ್ಲಿ ತರಬೇಕು. ನೀರನ್ನೂ ಹೊತ್ತು ತಂದು, ಮನೆಯ ಅಡುಗೆ ಇತ್ಯಾದಿ ಕೆಲಸವನ್ನು ಒಬ್ಬಳೇ ಹೆಣ್ಣುಮಗಳಿಗೆ ಮಾಡಲಾಗುವುದಿಲ್ಲ. ಹಾಗಾಗಿ ಇಲ್ಲಿ ಅನೇಕ ಗಂಡಂದಿರು ಎರಡು ಅಥವಾ ಮೂರನೇ ಮದುವೆಯಾಗಿದ್ದಾರೆ. ಆ ಪತ್ನಿಯರಿಗೆ 'ನೀರು ಪತ್ನಿ'ಯರೆಂದೇ (ವಾಟರ್ ವೈವ್ಸ್) ಹೆಸರು. ಅವರ ಬದುಕಿನ ನೈಜ ಚಿತ್ರವನ್ನು ಬಿಡಿಸಿದ್ದಾದರೆ ನಾವು ಮೇಲೆ ನೋಡಿದ ಎಲ್ಲ ನೀರು ಹೊರುವ ಕಲ್ಪಿತ ಹೆಣ್ಣು ಮಕ್ಕಳ ಬಿಂಬಕ್ಕಿಂತ ಬಹಳ ಭಿನ್ನವಾಗಿ ರೂಪ ತಾಳುತ್ತಿತ್ತು. ಇದರದ್ದೇ ವಿಸ್ತರಣೆಯೆಂಬಂತೆ, ನದಿಯನ್ನು ಹೆಣ್ಣಿಗೆ ಹೋಲಿಸಿ ಉಪಮೆ ಕಲ್ಪಿಸಿಕೊಳ್ಳುವುದು,



ಜೀವದಾಯಿ ಎಂದು ಬಣ್ಣಿಸುವ ಭಾರತೀಯ ಸಂಪ್ರದಾಯದ ಫಲವೇ ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತದಲ್ಲಿ ಕಾವೇರಿ ಜಲಮಂಡಳಿಯ ಹೊರಗಡೆ ಸ್ಥಾಪಿಸಲಾಗಿರುವ, ಕೊಡದಿಂದ ನೀರು ಸುರಿಯುತ್ತಿರುವ ಪುತ್ಥಳಿ. ಅದರ ಮೂಲದ ಒಂದು ಎಳೆ ಗ್ರೀಕ್ ಶಿಲ್ಪದ ಬಿಂಬಗಳಲ್ಲಿದೆ. ಅದಿರಲಿ, ವಿಶೇಷವೆಂದರೆ ಈ ಕಾವೇರಿಯ ಚಿತ್ರವನ್ನು ಹಲವಾರು ಕಡೆಗಳಲ್ಲಿ ನೋಡಬಹುದು, ಕೆಲವು ಕಡೆಗಳಲ್ಲಿ ಕಂಡು ಬರುವ ಕಾವೇರಿಯ ಚಿತ್ರ ನೀರು ಹೊರುವ ಸಾಮಾನ್ಯ ಹೆಂಗಸಿನ ಬಿಂಬದಂತೆ ಕಾಣುತ್ತದೆ. ಕುಟುಂಬದಲ್ಲಿ, ಸಮಾಜದಲ್ಲಿ ಹೆಣ್ಣು ವಹಿಸಬೇಕಾದ, ತೊಡಗಿಕೊಳ್ಳಬಹುದಾದ ಕೆಲಸಗಳೇನು ಎಂದು ಸಾಂಪ್ರದಾಯಿಕವಾಗಿ ಬೇರು ಬಿಟ್ಟಿರುವ ನಂಬಿಕೆಗಳು ಹೇಗೆ ಪ್ರತಿಪಾದಿಸುತ್ತವೆಯೋ ಅದು ಬಿಂಬಗಳಲ್ಲಿ ಸಹ ಪ್ರತಿಫಲನಗೊಳ್ಳುತ್ತದೆ.

ಶಶಿಕಾಂತ್ ಧೋತ್ರೆ ಹಾಗೂ ಇನ್ನಿತರ ಅನೇಕ ಕಲಾವಿದರ ಕೃತಿಗಳಲ್ಲಿ, ಹಬ್ಬದ ದಿನವೋ ಎಂಬಂತೆ ಶುಭ್ರ ಉಡುಗೆ ತೊಟ್ಟು, ಸೌದೆ ಒಲೆಯಲ್ಲಿ ಅಡುಗೆ ಮಾಡುತ್ತಿರುವ, ಬೀಸೋ ಕಲ್ಲಿನಲ್ಲಿ ಹಿಟ್ಟು ಬೀಸುತ್ತಿರುವ ಅಥವಾ ಕಿಟಕಿಯ ಒಳಬದಿಯಲ್ಲಿ ನಿಂತು ಯಾರಿಗಾಗಿಯೋ ಕಾಯುತ್ತಿರುವ, ತನ್ನನ್ನು ತಾನು ಅಲಂಕರಿಸಿಕೊಳ್ಳುತ್ತ ಕನ್ನಡಿಯಲ್ಲಿ ನೋಡಿಕೊಳ್ಳುತ್ತಿರುವ, ಮಕ್ಕಳಿಗೆ ಜಡೆ ಹೆಣೆಯುತ್ತಿರುವ, ದೀಪ ಹಚ್ಚುತ್ತ, ದೇವರಿಗೆ ಪೂಜೆ ಮಾಡುತ್ತಿರುವ ಹೀಗೆ ಸಾಂಪ್ರದಾಯಿಕ ಚೌಕಟ್ಟಿನ ಒಳಗಡೆಯೇ ಇರುವಂತೆ ಮತ್ತು ಮಕ್ಕಳು, ಅಡುಗೆ, ಸಂಸಾರ, ಮನೆ ಹೀಗೆ ಸಮಾಜದ ಅಪೇಕ್ಷೆಯ ಕಟ್ಟುಪಾಡು ಮೀರದಂತೆ, ಅದರೊಳಗೇ ತನ್ನ ಪ್ರಪಂಚವನ್ನು ಕಟ್ಟಿಕೊಂಡು ಅಲ್ಲೇ ನಿರತರಾಗಿರುವಂತೆ ಮಹಿಳೆಯರನ್ನು ಬಿಂಬಿಸಲಾಗುತ್ತದೆ. ಅದನ್ನು ತೋರಿಸುವಾಗ ಸಹ ಒಂದಷ್ಟು ಗ್ರಾಮೀಣ ಬಣ್ಣವನ್ನು ಅದಕ್ಕೆ ಬೆರೆಸಿ, ಕಣ್ಣಿಗೆ ಚೆಂದ ಕಾಣುವಂತೆ, ಬೆಡಗಿನ ಬಣ್ಣಗಳನ್ನು ಬಳಸಿ ಚಿತ್ರಿಸಲಾಗುತ್ತದೆ. ಈ ರೀತಿಯ ಚಿತ್ರಗಳಲ್ಲಿ ಸೌದೆ ಒಲೆಯಲ್ಲಿ ಹೊಗೆ ಬರುವುದಿಲ್ಲ, ಹೆಣ್ಣುಮಕ್ಕಳು ದಣಿಯುವುದಿಲ್ಲ, ಅವರಿಗೆ ವೃದ್ಧಾಪ್ಯವೂ ಬರುವುದಿಲ್ಲ – ಎಂದಾಗ ಅಲ್ಲಿ ಚಿತ್ರಿತವಾದ ಬಿಂಬಗಳನ್ನು ನಾವು ಬಹಳ ಅನುಮಾನದಿಂದ ನೋಡಬೇಕಾಗುತ್ತದೆ. ಶಶಿಕಾಂತ್ ಧೋತ್ರೆಯವರ ಒಂದು ಚಿತ್ರದಲ್ಲಿ ಅಲಂಕಾರ ಮಾಡಿಕೊಂಡ ಹೆಣ್ಣೊಬ್ಬಳು, ತನ್ನ ಮುಂದಿರುವ ಗಾಜಿನ ಜಾಡಿಯಲ್ಲಿರುವ ಒಂಟಿ ಬಣ್ಣದ ಮೀನನ್ನು ನೋಡುತ್ತಾ ಆಲೋಚನಾ







ಮಗ್ನಳಾಗಿದ್ದಾಳೆ. ಗಾಜಿನ ಜಾಡಿಯಂತಹ ಸಣ್ಣ ಪರಿಧಿಯ ಲೋಕದಲ್ಲಿ ಹುಟ್ಟಿ, ಬೆಳೆದು, ಅಲ್ಲೇ ಸುತ್ತುತ್ತಾ, ಅದರಲ್ಲೇ ಉಳಿಯುವ, ಬೇರೆಯವರ ನೋಟಕ್ಕೆ ಗ್ರಾಸವಾದ ಆ ಮೀನಿನ ಬಿಂಬ ಇಲ್ಲಿ ಕಾಣುವ ಹೆಣ್ಣಿನ, ಅವಳ ಸೀಮಿತ ಜಗತ್ತಿನ ಪ್ರತೀಕವೇ ಎನ್ನಿಸಿಬಿಡುತ್ತದೆ. ಈ ರೀತಿಯಲ್ಲಿ ಮಹಿಳೆಯರನ್ನು ಬಿಂಬಿಸುವ ಚಿತ್ರಗಳಿಗೆ ಬಹಳ ಬೇಡಿಕೆ ಕೂಡ ಇರುವುದರಿಂದ ಅದೇ ರೀತಿಯ ಕೃತಿಗಳನ್ನು ಪದೇ ಪದೇ, ಅಲ್ಪ ಸ್ವಲ್ಪ ಬದಲಾವಣೆಗಳೊಂದಿಗೆ ತಯಾರಿಸಲಾಗುತ್ತದೆ. ಹಾಗಾಗಿ ಮತ್ತೆ ಮತ್ತೆ ಅದೇ ಧೋರಣೆ ಪ್ರತಿಷ್ಠಾಪಿತವಾಗುತ್ತಾ ಹೋಗುತ್ತದೆ. ಅಲ್ಲಿ ತನ್ನನ್ನು ಹೇಗೆ ಬಿಂಬಿಸಲಾಗುತ್ತಿದೆ, ಹೇಗಿರಬೇಕು – ಹೇಗೆ ಬೇಡ ಎಂಬುದರ ಬಗ್ಗೆ ಏನಾದರೂ ಹೇಳಲಿಕ್ಕೆ ಮಹಿಳೆಗೆ ಯಾವುದೇ ನಿಯಂತ್ರಣವಿಲ್ಲ. ಅದು ಬಹುತೇಕ ಪುರುಷ ನಿಯಂತ್ರಿತ ಕ್ಷೇತ್ರ. ಇನ್ನೊಂದು ಬಗೆಯಲ್ಲಿ ಆಲೋಚಿಸಿದರೆ ಪುರುಷನ ಕಣ್ಣಿನ ಮೂಲಕವೇ ತನ್ನ ದೇಹವನ್ನು, ತನ್ನನ್ನು ತಾನು ನೋಡಿಕೊಂಡು, ಆ ಸ್ಥಿತಿಯನ್ನೇ ತನ್ನದೆಂದು ಒಪ್ಪಿಕೊಂಡ ಮಹಿಳೆಯ ಪರಿಸ್ಥಿತಿ ಸಹ ಇಲ್ಲಿದೆ.



ಇನ್ನು, ಇದಕ್ಕೆ ವಿರುದ್ಧವೆಂಬಂತೆ ನವ್ಯ ಕಾಲದ ಮಹಿಳೆ ಸ್ವತಂತ್ರಳು, ಯಾರ ಅಧೀನವು ಅಲ್ಲ, ಅವಳು ಅಬಲೆ ಅಲ್ಲ ಎಂದೆಲ್ಲ ಬಿಂಬಿಸುವ ಜಾಹೀರಾತುಗಳ ಕಥೆಯೇ ಬೇರೆ. ದೇವತೆ, ದಶಬಾಹುಗಳ ಶಕ್ತಿವಂತೆ ಎಂದೆಲ್ಲ ಬಣ್ಣಿಸುತ್ತಾ, ಅದೇ ದೈವೀ ಶಕ್ತಿಯನ್ನು ಸಾಮಾನ್ಯ ಮಹಿಳೆಗೂ ಆರೋಪಿಸಿ ಅವಳನ್ನೂ ಹೊಗಳುವ ಜಾಹೀರಾತುಗಳು ಸಹ ಅವಳನ್ನು ತಮ್ಮದೇ ಮೂಸೆಯಲ್ಲಿ ಎರಕ ಹೊಯ್ಯುತ್ತವೆ. ಆಕೆ ಶಕ್ತಿವಂತೆಯಾದ್ದರಿಂದ ಹತ್ತು ಪಟ್ಟು ಹೆಚ್ಚು ಕೆಲಸ ಮಾಡಬಲ್ಲಳು/ ಮಾಡಬೇಕು ಅದರಲ್ಲೇ ಅವಳ ಸಾರ್ಥಕ್ಯ ಎಂಬಂತಹ ಬೇಡಿಕೆಯನ್ನು ಅವಳ ಮೇಲೆ ಸೂಚ್ಯವಾಗಿ ಹೇರಲಾಗುತ್ತದೆ. ಇಲ್ಲಿ ಬರುವ ಸೂಚನೆಗಳು ಅಸಂಖ್ಯ– ದೇವತೆಯಂತೆ ಕಾಣುವ ಆಕೆ – ಮಗುವನ್ನೂ ಲಾಲಿಸಬೇಕು, ಮನೆಗೆಲಸ ಮಾಡಬೇಕು, ಅಡುಗೆ ಮಾಡಬೇಕು, ಪಾತ್ರೆ ತೊಳೆಯಬೇಕು, ಪೂಜೆ ಮಾಡಬೇಕು, ಗಾಡಿ ಓಡಿಸಬೇಕು, ಕೆಲಸಕ್ಕೆ ಹೋಗಬೇಕು, ಕಂಪ್ಯೂಟರ್ ಬಳಸಬೇಕು, ಇದರ ಜೊತೆಗೆ ವ್ಯಾಯಾಮವನ್ನೂ ಮಾಡಿ ತನ್ನ ಸೌಂದರ್ಯದ ಕಡೆಗೂ ಗಮನ ಹರಿಸಬೇಕು. ಇಷ್ಟಾದರೂ ಅವಳು ದಣಿದಂತೆ ಕಾಣುವುದಿಲ್ಲ, ಅದು ಆಶ್ಚರ್ಯದ ಸಂಗತಿ. ಬೆಳಿಗ್ಗೆ ಬೇಗ ಎದ್ದು, ಅತ್ತೆ ಮಾವಂದಿರಿಗೆ, ಗಂಡನಿಗೆ ಊಟದ ಡಬ್ಬಿ ರೆಡಿ ಮಾಡಿ, ತನಗೂ ಡಬ್ಬಿ ಕಟ್ಟಿಕೊಂಡು, ಮನೆಗೆಲಸ ಮುಗಿಸಿ, ಹೊರಗೆ ಹೋಗಿ ದುಡಿದು ಬಂದು ಸಂಜೆ ಮತ್ತದೇ ಮನೆ ಕೆಲಸದಲ್ಲಿ ತೊಡಗುವ ಅಸಂಖ್ಯ ಮಹಿಳೆಯರ ಪಾಡು ಇಲ್ಲಿ ತೋರಿಸಬಹುದಿತ್ತು, ಆದರೆ ಇಲ್ಲಿ ಹಾಗಾಗಿಲ್ಲ ಯಾಕೆಂದರೆ ಈ ಬಿಂಬದ ಸೃಷ್ಟಿ, ಸಂಚಲನೆ ಮತ್ತು ಸ್ವೀಕೃತಿಯ ಮೇಲೆ ಮಹಿಳೆಗೆ ಹೆಚ್ಚಿನ ನಿಯಂತ್ರಣವಿಲ್ಲ. ಇನ್ನೂ ಕೆಲವು

ಜಾಹೀರಾತುಗಳಲ್ಲಿ ದಂಪತಿಯರಿಬ್ಬರೂ, ಒಂದೇ ಆಫೀಸಿನಲ್ಲಿ ಕೆಲಸ ಮಾಡುವ ಸಂದರ್ಭ, ಕಚೇರಿಯಲ್ಲಿ ಉನ್ನತ ಹುದ್ದೆಯಲ್ಲಿ ಇರುವ ಆಕೆ, ಅಲ್ಲಿ ಗಂಡನಿಗೆ ಜೋರಿನಿಂದ ಕೆಲಸ ಹೇಳುವವಳು ಮನೆ ತಲುಪಿದಂತೆ ಆಕೆಯ ದನಿಯೇ ಬದಲಾಗಿ ಗಂಡನಿಗೆ ಅಧಿಕಾರದ ಹಕ್ಕು ವರ್ಗಾವಣೆ ಮಾಡುತ್ತಾಳೆ. ಇನ್ನೂ ಕೆಲವು ಜಾಹೀರಾತುಗಳಲ್ಲಿ ಗಂಡಿನಂತೆ ಸಿಗರೇಟು ಸೇದಿದಾಗ ಅಥವಾ ಸಾಹಸ ಕೃತ್ಯಗಳಲ್ಲಿ ಸ್ತ್ರೀ ಪುರುಷನಿಗೆ ಸಮಾನಳು ಎಂಬಂತಹ ಸೂಚನೆ ನೀಡುತ್ತವೆ. ಇದೆಲ್ಲ ಸಮಾನತೆಗಿಂತ ಹೆಚ್ಚಾಗಿ ಆ ಕಂಪನಿಗಳ ಲಾಭಕ್ಕಷ್ಟೇ ಎಂದು ಒತ್ತಿ ಹೇಳಬೇಕಿಲ್ಲ.

ಶಾಲೆಗಳಲ್ಲಿ, ಅಂಗಡಿಗಳಲ್ಲಿ ಐಡಿಯಲ್ ಬಾಯ್, ಐಡಿಯಲ್ ಗರ್ಲ್ ಎಂಬ ಪಟಗಳು ದೊರೆಯುತ್ತವೆ. ಒಳ್ಳೆ ಅಭ್ಯಾಸಗಳು. ಕೆಟ್ಟ ಅಭ್ಯಾಸಗಳು ಇವನ್ನು ಮಕ್ಕಳಿಗೆ ತಿಳಿ ಹೇಳಲು ಶಾಲೆಗಳಲ್ಲಿ ಬಳಸುವ ಪಟಗಳು ಇವು. ಅದರಲ್ಲಿ ಸಾಮಾನ್ಯವಾಗಿ ಹುಡುಗರಿಗೆ ಬೇರೆ ಮಾನದಂಡವಾದರೆ, ಹುಡುಗಿಯರಿಗೆ ಬೇರೆ ಕಥನವೇ ಇರುತ್ತವೆ. ಅಲ್ಲಿ ಏನನ್ನು ತೋರಿಸಿಲ್ಲ ಎಂಬುದು ಸಹ ಮುಖ್ಯ. ಉದಾಹರಣೆಗೆ ವೃತ್ತಿಗಳ ಕುರಿತಾದ ಕೆಲವೊಂದು ಪಟದಲ್ಲಿ ಮೀನು ಮಾರುವುದನ್ನು ಬಿಟ್ಟರೆ ಮಿಕ್ಕವೆಲ್ಲ ವೃತ್ತಿಯನ್ನು ಪುರುಷರೇ ನಡೆಸುತ್ತಿರುವಂತೆ ತೋರಿಸಲಾಗಿದೆ. ಹುಡುಗಿ–ಯರು, ಸ್ತ್ರೀಯರು ಯಾವ ರೀತಿ ಬಟ್ಟೆ ಧರಿಸಬೇಕು, ಹೇಗೆ ನಡೆದುಕೊಳ್ಳಬೇಕು, ಅವರು ಯಾವ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು ಅಪೇ–ಕ್ಷಣೀಯ, ಯಾವುದು ನಿಷೇಧ ಈ ಬಗೆಯ ಸೂಚನೆಗಳು ಬರೀ ಇಂತಹ ಪಟಗಳಿಂದ ಮಾತ್ರ ಬರುವುದಿಲ್ಲ. ಜನಪ್ರಿಯ ಸಿನೆಮಾಗಳಲ್ಲಿ, ದಿನ ನಿತ್ಯ ಮನೆ ಮಂದಿಯೆಲ್ಲ ಕೂತು ಬಾಯಿತೆರೆದು ನೋಡುವ ಟಿ.ವಿ. ಸೀರಿಯಲ್‌ಗಳಲ್ಲಿ ತೋರಿಸಲಾಗುವ ಮಹಿಳೆಯರ ಬಿಂಬಗಳ – ಮೂಲಕವೂ, ಹೆಚ್ಚಿನ ಸಲ ಸೂಚ್ಯವಾಗಿ, ಕೆಲವು ಸಲ ಅವುಗಳಲ್ಲಿ ಬರುವ – ಸಂಭಾಷಣೆಯ ಮೂಲಕ ವಾಚ್ಯವಾಗಿಯೇ ಸಮಾಜಕ್ಕೆ









ತಿಳಿ ಪಡಿಸಲಾಗುತ್ತದೆ. ಸಿನೆಮಾದಲ್ಲಿ ದೊಡ್ಡ ಪರದೆಯ ಮೇಲೆ, ಹಿರಿದಾದ ಗಾತ್ರದಲ್ಲಿ ನೋಡಿದ ಪಾತ್ರಗಳು ಅಷ್ಟು ಪ್ರಭಾವ ಬೀರದಿದ್ದರೂ ಮನೆಯೊಳಗೇ ಹೊಕ್ಕ ಟಿ.ವಿ., ಅದರಲ್ಲಿ ನಮ್ಮ ನಿಮ್ಮಂತೆ ಕಾಣುವ ಪಾತ್ರಗಳು ನಡೆದುಕೊಳ್ಳುವ ರೀತಿಯಿಂದಾಗಿ ಅಲ್ಲಿನ ಬಿಂಬಗಳು ಹಾಗೂ ಅವು ಸೂಚಿಸುವ ಮೌಲ್ಯಗಳು ನೇರ ಸುಪ್ತಮನಸನ್ನು ಹೋಗುವ ಸಾಧ್ಯತೆ ಇದೆ. ಈ ಬಿಂಬಗಳನ್ನು ಸುತ್ತಲ ಸಮಾಜದ ಮನಸ್ಥಿತಿಯ ಪ್ರತಿಫಲನ ಎನ್ನಬಹುದು.

ಸೃಷ್ಟಿ ಕಲಾಶಾಲೆಯ ಐದು ಜನ ವಿದ್ಯಾರ್ಥಿಗಳು ಸೇರಿ ೨೦೧೫ರಲ್ಲಿ ಇಂತಹ (ಅಪ)ಮೌಲ್ಯಗಳ 'ಬ್ಯಾಡ್ ಗರ್ಲ್' ಎಂಬ ಪಟವೊಂದನ್ನು ತಯಾರಿಸಿದ್ದಾರೆ. ಅದರಲ್ಲಿ ಇಂತಿಂಥ ಕೆಲಸಗಳನ್ನು ಹೆಣ್ಣುಮಕ್ಕಳು ಮಾಡಿದರೆ ಆ ಮಹಿಳೆಯರು 'ಕೆಟ್ಟವರು' ಎಂದು ನಮ್ಮ ಸಮಾಜದ ಕೆಲವರು ಹೆಸರಿಡುತ್ತಾರೋ ಅವುಗಳಲ್ಲಿ ಕೆಲವನ್ನು ತೋರಿಸಲಾಗಿದೆ. ತಲೆ ಕೂದಲನ್ನು ಹಾರಾಡುವಂತೆ ಬಿಡುವವಳು, ಮೋಟಾರ್ ಬೈಕನ್ನು ಓಡಿಸುವವಳು, ಪಾರ್ಕಿನಲ್ಲಿ ಹುಡುಗರೊಂದಿಗೆ ಓಡಾಡಿ ಪ್ರೇಮದಲ್ಲಿ ಬೀಳುವವಳು, ಹುಡುಗರನ್ನು ಆಸೆಯಿಂದ ನೋಡುವವಳು, 'ತಪ್ಪು' ರೀತಿಯ ಬಟ್ಟೆ ತೊಡುವವಳು, ಪಬ್ – ಡಿಸ್ಕೋಗಳಿಗೆ ಹೋಗಿ ಮದ್ಯಪಾನ ಮಾಡುವವಳು, ಹುಡುಗರೊಂದಿಗೆ ಸುತ್ತಾಡುವವಳು, ಬಲಾತ್ಕಾರದ ಬಗ್ಗೆ ಪೋಲಿಸ್ ಠಾಣೆಯಲ್ಲಿ ಕಂಪ್ಲೇಂಟ್ ಬರೆಯುವವಳು, ರೊಟ್ಟಿಯನ್ನು ದುಂಡಗೆ ಲಟ್ಟಿಸಲು ಬರದವಳು, ಗೋವಾಗೆ ಹೋಗುವವಳು – ಹೀಗೆ ಯಾವುದನ್ನು ಪೂರ್ವಾಗ್ರಹಪೀಡಿತ ಸಮಾಜ ಮತ್ತು ಅದರಲ್ಲೂ ಮುಖ್ಯವಾಗಿ ಸಾಂಪ್ರದಾಯಿಕ ಮನಸುಳ್ಳ ಕೆಲವರು ಎಲ್ಲರ ಮೇಲೂ ಹೇರಲು ಯತ್ನಿಸುತ್ತಾರೋ ಅದನ್ನು ಒಪ್ಪಿಕೊಂಡಂತೆ ಮಾಡುತ್ತಲೇ ಲೇವಡಿ ಮಾಡುವ ಪರಿ ಇದು. ಅದೇ ತರಹದ ಇನ್ನೊಂದು ಅನಾಮಧೇಯ ಪಟ ಕೂಡ ಅಂತರ್ಜಾಲದಲ್ಲಿ ಓಡಾಡುತ್ತಿದೆ. ಸ್ತ್ರೀಯರನ್ನು ಬಿಂಬಿಸುವ ಕಥನದ ಮೇಲೆ ನಿಯಂತ್ರಣ ಪಡೆಯುವ ಅಥವಾ ರೂಢಿಗತ ಬಿಂಬಗಳನ್ನು ಒಳಗಿನಿಂದಲೇ ಹುಸಿ ಮಾಡುವ 'ಸಬ್‌ವರ್ಸಿವ್' ಹೆಜ್ಜೆಗಳು ಇಂತಹ ಸಣ್ಣ ಪ್ರಯತ್ನಗಳಿಂದಲೇ ಆರಂಭವಾಗುತ್ತದೆ ಎನಿಸುತ್ತದೆ. ಸ್ತ್ರೀಯರನ್ನು ಚಿತ್ರಿಸುವ ಪ್ರತಿಯೊಂದು ಬಿಂಬವನ್ನೂ ವಿಮರ್ಶಿಸುವ ಅಭ್ಯಾಸದಿಂದಲೇ ಇಂತಹ ಮರು ಕಥನದ ಸಾಧ್ಯತೆಗಳು ಹುಟ್ಟಿಕೊಳ್ಳುತ್ತವೆ.

*